**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಬೇಲೂರು**
**ಸಿ.ಸಿ.406/2022**

| | | |
|---|---|---|
| ಸಾಕ್ಷಿದಾರರ ಹೆಸರು : | ಶಿವನ ಗೌಡ ಪಾಟೀಲ್ | ಪ್ರಮಾಣ ವಚನ ಬೋಧಿಸಿದ ದಿನಾಂಕ: 0**8.07.2024** |
| ತಂದೆಯ ಹೆಸರು : | ಗುರುಪಾದಪ್ಪ ಗೌಡ ಪಾಟೀಲ್ | |
| ವಯಸ್ಸು : | 33 ವರ್ಷ | ಪಿ.ಡಬ್ಲ್ಯೂ.-9 |
| ಉದ್ಯೋಗ : | ಪಿ ಎಸ್ ಐ, ಜಿಲ್ಲಾ ಪೋಲೀಸ್ ಕಛೇರಿ, ಹಾಸನ | ಸಿ.ಡಬ್ಲ್ಯೂ.-11 |
| ವಾಸ ಸ್ಥಳ : | ಬೇಲೂರು | |

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ :-**

1. ನಾನು ಬೇಲೂರು ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ 12.11.2020 ರಿಂದ 18.01.2023 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 28/02/2022 ರಂದು ಸಂಜೆ 6-30 ಗಂಟೆಗೆ ನಾನು ಠಾಣಾಧೀಕಾರಿಯಾಗಿದ್ದಾಗ ಪಿರ್ಯಾಧಿ ಠಾಣೆಗೆ ಹಾಜರಾಗಿ ನೀಡಿದ ನಿಪಿ 12 ದೂರನ್ನು ಸ್ವೀಕರಿಸಿರುತ್ತೇನೆ. ನಿಪಿ 12 ರ ಆಧಾರದ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ: 43**/2022** ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇನೆ. ನಿಪಿ-12 ರಲ್ಲಿ ಸಾಕ್ಷಿ ತನ್ನ ಷರಾ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12(ಬಿ) ಮತ್ತು 12(ಸಿ) ಎಂದು ಗುರುತಿಸಲಾಯಿತು. ಪ್ರ. ವ ವರದಿಯನ್ನು ತನ್ನ ಮೇಲಾಧಿಕಾರಿಗಳಿಗೂ ಮತ್ತು ಘನ ನ್ಯಾಯಾಲಯಕ್ಕೂ ಸಲ್ಲಿಸಿರುತ್ತೇನೆ. ಪ್ರ. ವ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಿಪಿ-13 ನ್ನು **ಹೆಚ್ ಸಿ 265 ರವರ** ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಮುಂದಿನ ತನಿಖೆಯನ್ನು ಚಾಸಾ 12 ರವರಿಗೆ ನೀಡಿರುತ್ತೇನೆ. ಚಾಸಾ 12 ರವರು ಆರೋಪಿಗಳನ್ನು ಪತ್ತೆ ಹಚ್ಚುವಂತೆ ನನಗೆ ಮೆಮೋ ನೀಡಿದರು. ಸಾಕ್ಷಿ ಸದರಿ ಮೆಮೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 14 ಎಂದು ಗುರುತಿಸಲಾಯಿತು. ಅದೇ ದಿನ ನನ್ನ ಸಿಬ್ಬಂದಿ ಚೇತನ್ ರವರೊಂದಿಗೆ ಪುರಸಬೆ ಹತ್ತಿರ ಹೋದೆ ಅಲ್ಲಿ ಆರೋಪಿತರಾದ ಗೋಕುಲ್ ಮತ್ತು ಚಂದ್ರಶೇಖರ್ ಇದ್ದು ಅವರನ್ನು ವಶಕ್ಕೆ ಪಡೆದು ಚಾಸಾ 12 ರವರ ಮುಂದೆ ಹಾಜರುಪಡಿಸಿರುತ್ತೇನೆ. ನಾನು ವಶಕ್ಕೆ ಪಡೆದ ಅರೋಪಿತಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು : ಎಸ್.ಎನ್ ಎಲ್   ವಕೀಲರಿಂದ ಆರೋಪಿತರ ಪರವಾಗಿ:-</u>**

1. ಪಿರ್ಯಾಧಿ  ನಮ್ಮ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಪಿರ್ಯಾದಿಯನ್ನು ನಾನು ದೂರು ನೀಡಿದ ಸಮಯದಲ್ಲಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ.  ಪಿರ್ಯಾದಿ ಸುಳ್ಳು ದೂರು ನೀಡಿದ್ದು ಪಿರ್ಯಾದಿ ನಮ್ಮ ಠಾಣೆ ಸಿಬ್ಬಂದಿ ಆಗಿರುವುವ ಕಾರಣ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರನ್ನು ನನ್ನ ವಶಕ್ಕೆ ಪಡೆದಿಲ್ಲ ಚಾಸಾ 12 ರವರ ಮುಂದೆ ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

**<u>ಮರು ವಿಚಾರಣೆ : ಏನೂ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)**

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು.